# ಮಲೇಶಿಯನ್ ಪಾಮೆಣ್ಣೆ ದರ ಹೆಚ್ಚಳ

ಇತರ ಪ್ರತಿಸ್ಪರ್ಧಿ ಖಾದ್ಯತೈಲ ಬೀಜಗಳು ಮತ್ತು ಕ್ರೂಡ್ ಎಣ್ಣೆಗಳ ದರ ಗಳಿಕೆಯ ಬಲದಿಂದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರಗಳು ಹೆಚ್ಚಳಗೊಂಡು ಬಿ.ಎಮ್.ಡಿ. ಫ್ಯೂಚರ್ ದರ 0.8% ಶೇಕಡಾ ಹೆಚ್ಚಳವಾಗಿ 5–10–2015ರ ಮಧ್ಯಾಹ್ನ ಪ್ರತಿ ಟನ್‌ಗೆ 2406 ರಿಂಗ್ಗಿಟ್ಸ್ (546.8 ಡಾಲರ್) ಮುಟ್ಟಿತ್ತು.

ಹೆಚ್ಚುವರಿ ದಾಸ್ತಾನು ಹೊಂದಿರುವ ಇಂಡೋನೇಶ್ಯಾದಿಂದ ಆಮದು ಪಾಮೆಣ್ಣೆ ಹೆಚ್ಚಿನ ಗಳಿಕೆಯನ್ನು ತಡೆಯಬಹುದೆನ್ನಲಾಗಿದೆ. ಹಿಂದಿನ ವಾರ ಕ್ರೂಡ್ ಪಾಮೆಣ್ಣೆ ದರ ಹಿಂದಿನ 15 ತಿಂಗಳುಗಳಲ್ಲೇ ಗರಿಷ್ಠ ಮಟ್ಟವಾದ 2460 ರಿಂಗಿಟ್ಸ್ ಗಳಿಗೆ ಏರಿಕೆಯಾಗಿ ಹಿಂದಿನ ತಿಂಗಳು 20% ಗಳಿಕೆಗೆ ಕಾರಣವಾಗಿತ್ತು.